# ದಾರಿ ತಪ್ಪುತ್ತಿರುವ ಧಾರಾವಾಹಿಗಳು

ಆಧುನಿಕ ಮನುಷ್ಯನ ಪಾಲಿಗೆ ದೂರದರ್ಶನವೆಂಬುದು ಕೇವಲ ಭೋಗವಸ್ತುವಾಗಿ ಉಳಿಯದೆ, ಅಗತ್ಯ ವಸ್ತುವೆನ್ನಿಸಿದೆ. ಕೆಲವು ವರ್ಷಗಳ ಹಿಂದೆ ಶ್ರೀಮಂತರ ಮನೆಗಳಲ್ಲಿ ಮಾತ್ರ ಸ್ಥಾನ ಪಡೆಯುತ್ತಿದ್ದ ಟಿ.ವಿ. ಪೆಟ್ಟಿಗೆ ಈಗ ಸರ್ವವ್ಯಾಪಿಯಾಗಿದೆ. ಜಗತ್ತಿನ ಯಾವುದೇ ಮೂಲೆಯಲ್ಲಿ ನಡೆಯುತ್ತಿರುವ ಘಟನೆಯನ್ನು ಆ ಕ್ಷಣವೇ ನಮ್ಮೆದುರು ಪ್ರತ್ಯಕ್ಷಗೊಳಿಸುವ ಸಾಮರ್ಥ್ಯವಿರುವ ಟಿ.ವಿ. ಅತ್ಯಂತ ಸಮರ್ಥ ಸುದ್ದಿ ಪ್ರಸಾರ ಮಾಧ್ಯಮವಾಗಿ ಕೆಲಸ ಮಾಡುತ್ತಿದೆ. ಜೊತೆಗೆ ಮನೋರಂಜನೆ, ಸಂಸ್ಕೃತಿ, ಸಾಹಿತ್ಯ, ಕಲೆ, ಪರಿಸರ, ವಾಣಿಜ್ಯ– ಈ ಎಲ್ಲ ಆಯಾಮಗಳನ್ನು ಎಟುಕಿಸಿಕೊಳ್ಳುವ ದೂರದರ್ಶನ ಮನುಷ್ಯನ ಭಾವ ದಿಗಂತ ಹಾಗೂ ಜ್ಞಾನದ ಪರಿಧಿಗಳನ್ನು ವಿಸ್ತೃತಗೊಳಿಸುವ ದಿಕ್ಕಿನಲ್ಲಿ ಅತ್ಯಂತ ಶಕ್ತಿಶಾಲಿಯಾದ ಆವಿಷ್ಕಾರವಾಗುವ ಎಲ್ಲ ಸಾಧ್ಯತೆಗಳನ್ನೂ ಹೊಂದಿದೆ.

ಆದರೆ ಈಗೀಗ ಟಿ.ವಿ. ಎಂಬುದು ತನ್ನ ಮೂಲ ಉದ್ದೇಶವನ್ನೇ ಮರೆತು, ಕೇವಲ ವಾಣಿಜ್ಯೋದ್ದೇಶಕ್ಕಾಗಿಯೇ ಬಳಕೆಯಾಗುತ್ತಿದೆಯೇನೋ ಎಂಬ ಸಂದೇಹ ಉಂಟಾಗುತ್ತದೆ. ಬಹು ಭಾಷಾ ಪರಿಸರವಿರುವ ಭಾರತದಂಥ ದೇಶಗಳಲ್ಲಿ ಒಂದೊಂದು ಭಾಷೆಗೂ ಪ್ರತ್ಯೇಕ ವಾಹಿನಿಗಳ ಅಗತ್ಯವಿರುವುದು ಸಹಜ. ಆದರೆ ಹೀಗೆ ಹುಟ್ಟಿಕೊಂಡ ಹಲವಾರು ವಾಹಿನಿಗಳಲ್ಲಿ ಅನಾರೋಗ್ಯಕರ ಸ್ಪರ್ಧೆಗೆ ಅವಕಾಶವಾಗಿರುವುದು ಮಾತ್ರ ಅಪಾಯಕಾರಿ. ಹೆಚ್ಚು ಮಂದಿ ವೀಕ್ಷಕರನ್ನು ತಮ್ಮತ್ತ ಸೆಳೆದುಕೊಳ್ಳಬೇಕೆಂಬ ಪೈಪೋಟಿಯಲ್ಲಿ ಒಂದೊಂದು ವಾಹಿನಿಯಲ್ಲೂ ದಿನಕ್ಕೆ ಕನಿಷ್ಠ ನಾಲ್ಕೈದು ಧಾರಾವಾಹಿಗಳು ಪ್ರಸಾರಗೊಳ್ಳುವಂತಾಗಿದೆ. ಯಾವುದೇ ಮೌಲಿಕ ಉದ್ದೇಶಗಳಿಲ್ಲದೇ, ನೋಡುಗರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ಸಲುವಾಗಿಯೇ ಹುಟ್ಟಿಕೊಳ್ಳುತ್ತಿರುವ ಹಲವು ಧಾರಾವಾಹಿಗಳ ವೀಕ್ಷಣೆಯಿಂದ ಸಂಭವಿಸಬಹುದಾದ ನೇತ್ಯಾತ್ಮಕ ಪರಿಣಾಮಗಳನ್ನು ಕುರಿತು ಗಂಭೀರವಾಗಿ ಯೋಚಿಸಬೇಕಾದುದು ತೀರಾ ಅಗತ್ಯ. ಕೌಟುಂಬಿಕ ಕಲಹ, ಸ್ವಾರ್ಥ, ದುರಾಶೆ, ಈರ್ಷ್ಯೆ, ದಾಂಪತ್ಯ ವಿರಸ, ದ್ವೇಷ– ಇಂಥವುಗಳನ್ನೇ ಮೂಲದ್ರವ್ಯವನ್ನಾಗಿರಿಸಿಕೊಂಡು, ಅತ್ಯಂತ ವಾಚ್ಯ ಸಂಭಾಷಣೆ ಹಾಗೂ ದೃಶ್ಯಗಳಿಂದ ವೀಕ್ಷಕರ ಮನಸ್ಸಿನಲ್ಲಿ ಅಂತರ್ಗತವಾಗಿರುವ ವಿಕಾರಗಳನ್ನು ಪ್ರಚೋದಿಸುವ ಇಂಥ ಧಾರಾವಾಹಿಗಳು ದೀರ್ಘಕಾಲ ಮುಂದುವರೆಯುತ್ತವೆ. ಹಿಂಸೆ, ಕ್ರೌರ್ಯಗಳನ್ನು ವೈಭವೀಕರಿಸುತ್ತಾ, ಭೀಭತ್ಸ ಸನ್ನಿವೇಶಗಳನ್ನು ಕಣ್ಣೆದುರು ರಾಚುತ್ತಾ ಸಾಗುವ ಧಾರಾವಾಹಿಗಳು ಸಮಾಜಕ್ಕೆ ನೀಡುವ ಸಂದೇಶವೇನೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇತ್ತೀಚೆಗೆ ಕನ್ನಡದ ಒಂದು ಧಾರಾವಾಹಿಯಲ್ಲಿ ಸಭ್ಯ, ಸಜ್ಜನ ಯುವಕನೊಬ್ಬನನ್ನು ಒಬ್ಬ ದುಷ್ಟ ಬೆಟ್ಟವೊಂದರಿಂದ ತಳ್ಳಿ ಕೊಲೆ ಮಾಡಲು ಪ್ರಯತ್ನಿಸುತ್ತಿದ್ದ ಭೀಕರ ದೃಶ್ಯ ವಾರಗಟ್ಟಲೆ ಪ್ರಸಾರವಾಗುತ್ತಿತ್ತು. ಖ್ಯಾತ ನಿರ್ದೇಶಕರೊಬ್ಬರು ನಿರ್ದೇಶಿಸುತ್ತಿರುವ ಇನ್ನೊಂದು ಧಾರಾವಾಹಿಯಲ್ಲಿ ರಾಜಕೀಯ ಹಾಗೂ ವ್ಯಾವಹಾರಿಕ ಕಾರಣಗಳಿಗಾಗಿ ಸಚಿವೆಯೊಬ್ಬರ ಅಮಾಯಕ ಪುತ್ರಿಯನ್ನು ಅಪಹರಿಸುವ ದೃಶ್ಯ ಅತ್ಯಂತ ವಿವರ ಪೂರ್ಣವಾಗಿ ಪ್ರಸಾರವಾಯಿತು. ಇವು ಕೆಲವೇ ಕೆಲವು ಉದಾಹರಣೆಗಳಷ್ಟೇ. ಕೊಲೆ, ಆತ್ಮಹತ್ಯೆ, ಗಂಡ ಹೆಂಡಿರ ನಡುವಿನ ಸಂಬಂಧದಲ್ಲಿ ಹುಳಿ ಹಿಂಡುವಿಕೆ– ಇತ್ಯಾದಿಗಳನ್ನು ನಾವು ಟಿ.ವಿ. ಪರದೆಯ ಮೇಲೆ ಮತ್ತೆ ಮತ್ತೆ ನೋಡುತ್ತಲೇ ಇರುತ್ತೇವೆ. ದೌಷ್ಟ್ಯದ ವಿಜೃಂಭಣೆಯ ಜೊತೆ ಜೊತೆಗೇ ಅದನ್ನು ಕಾರ್ಯರೂಪಕ್ಕೆ ತರುವ ಹೊಸ ಹೊಸ ತಂತ್ರಗಾರಿಕೆ ಮತ್ತು ಕೌಶಲಗಳನ್ನು ವಿವರವಾಗಿ ತೋರಿಸಿ, ವೀಕ್ಷಕರಲ್ಲಿನ ತಾಮಸ ಕುತೂಹಲವನ್ನು ಕೆರಳಿಸುವುದೇ ಈಗಿನ ಬಹುತೇಕ ಧಾರಾವಾಹಿಗಳ ಉದ್ದೇಶವಾದಂತಿದೆ.

ಸೀಮಿತ ಅವಧಿಯ ಕಟ್ಟುಪಾಡಿಲ್ಲದ ಇಂದಿನ ಧಾರಾವಾಹಿಗಳಿಗೆ ಪೂರ್ವನಿಶ್ಚಿತ ಕಥೆಯ ಚೌಕಟ್ಟಿನ ಅಗತ್ಯವಿಲ್ಲ. ಆರಂಭದಲ್ಲಿ ಕಾಣಿಸಿಕೊಳ್ಳುವ ಪಾತ್ರಗಳು (ಕೆಲವೊಮ್ಮೆ ಪಾತ್ರಧಾರಿಗಳೂ) ಕಣ್ಮರೆಯಾಗಿ, ಹೊಸ ಪಾತ್ರಗಳು ಧೀಡೀರನೆ ಪ್ರತ್ಯಕ್ಷವಾಗುತ್ತಾ, ಸನ್ನಿವೇಶಗಳು ಅಸಂಬದ್ಧವಾಗಿ, ಅಸಹಜವಾಗಿ ಬೆಳೆಯುತ್ತಾ, ಧಾರಾವಾಹಿ ದಾರಕಿತ್ತ ಗಾಳಿಪಟದಂತೆ ಬೇಕಾಬಿಟ್ಟಿ ಹಾರಾಡತೊಡಗುತ್ತದೆ. ವೀಕ್ಷಕರಲ್ಲಿನ ಸ್ಪಂದನ ಶೀಲತೆಯನ್ನು ಧ್ವಂಸಮಾಡಿ, ಹಿಂಸಾರತಿ, ಸ್ವಾರ್ಥ ಮುಂತಾದ ವಿಕಾರಗಳನ್ನು ಉತ್ತೇಜಿಸುವ ಇಂಥ ಧಾರಾವಾಹಿಗಳಿಗೆ ಸಾಮಾಜಿಕ ಬದ್ಧತೆ, ನೈತಿಕ ಹೊಣೆಗಾರಿಕೆಗಳ ಹಂಗೇ ಇಲ್ಲ. ಸೆನ್ಸಾರ್‌ನ ಲಗಾಮೂ ಇಲ್ಲ. ಹಿರಿಯರೊಂದಿಗೆ ಮಕ್ಕಳೂ ಇಂಥ ಧಾರಾವಾಹಿಗಳನ್ನು ನೋಡುತ್ತಿರುತ್ತಾರೆ. ಅಲ್ಲದೆ, ಮಕ್ಕಳಿಗೆಂದೇ ಮೀಸಲಾಗಿರುವ ವಾಹಿನಿಗಳಲ್ಲೂ ಹಿಂಸೆ, ಕ್ರೌರ್ಯ, ಹೊಡೆದಾಟಗಳೇ ಮೇಲ್ಮೈ ಪಡೆಯುತ್ತಿವೆ. ಪರಿಣಾಮವಾಗಿ ಎಳೆಯ ಮನಸ್ಸುಗಳಲ್ಲಿನ ಮುಗ್ಧತೆ ನಾಶವಾಗಿ, ಭವಿಷ್ಯದ ಜನಾಂಗ ವಿರೂಪಗೊಳ್ಳುವ ಸಾಧ್ಯತೆಯಿದೆ. ಇಂಥ ಅಪಾಯವನ್ನು ಕುರಿತು ಸಮಾಜ ವಿಜ್ಞಾನಿಗಳೂ, ಮನೋವಿಜ್ಞಾನಿಗಳೂ, ಚಿಂತಕರೂ ತೀವ್ರವಾಗಿ ಯೋಚಿಸಬೇಕಾದ ಕಾಲ ಸನ್ನಿಹಿತವಾಗಿದೆಯಲ್ಲವೇ?

■ ವೈನತೇಯ

## ಮಾತೇ ಮುತ್ತು

★ ಪ್ರೀತಿ ಇಲ್ಲದ ಮೇಲೆ ಮಾತಿಗೆ ಮಾತು ಕೂಡೀತು ಹೇಗೆ? ಅರ್ಥ ಹುಟ್ಟೀತು ಹೇಗೆ?

–ಜಿ.ಎಸ್.ಶಿವರುದ್ರಪ್ಪ

★ ಭೂಮಿಯ ಮೇಲಿನ ಬೇರೆಲ್ಲದ್ದಕ್ಕಿಂತ ಮನುಷ್ಯ ಆಲೋಚನೆಗೆ ಹೆದರುತ್ತಾನೆ. ಅದು ಶ್ರೇಷ್ಠವಾದದ್ದು, ತೀವ್ರ ಹಾಗೂ ಮುಕ್ತವಾದದ್ದು.

–ಬರ್ಟ್ರಂಡ್ ರಸೆಲ್

★ ಒಬ್ಬನನ್ನು ಕೊನೆಯವರೆಗೂ ಮೋಸಗೊಳಿಸಬಹುದು, ಕೆಲವರನ್ನು ಕೆಲವು ಸಮಯದವರೆಗೂ ಮೋಸಗೊಳಿಸಬಹುದು. ಆದರೆ ಎಲ್ಲಾ ಕಾಲದಲ್ಲೂ ಎಲ್ಲರನ್ನೂ ಮೋಸಗೊಳಿಸಲು ಆಗದು.

–ಅಬ್ರಹಾಂ ಲಿಂಕನ್

★ ಸುಲಭ ಬೆಲೆಯಲ್ಲಿ ಖರೀದಿಸಿ, ಅಧಿಕ ಬೆಲೆಗೆ ಮಾರಾಟ ಮಾಡುವುದು ಮನಿಷ್ಯನಿಗೆ ದೊಡ್ಡ ಕಳಂಕವಲ್ಲದೆ ಮತ್ತೇನು?

–ಮಹಾತ್ಮ ಗಾಂಧೀಜಿ

★ ಬೇರೆಯವರು ತುಳಿದ ಹಾದಿಯಲ್ಲಿ ನೀವು ಹೋದರೆ ಏನು ಸಾಧಿಸಿದಂತಾಗುತ್ತದೆ. ಬದಲಿಗೆ ಬೇರೆ ಹಾದಿ ತುಳಿಯಿರಿ. ಅಲ್ಲಿ ನಿಮಗೆ ಹೊಸ ಅನುಭವ, ಸಾಹಸ, ರೋಮಾಂಚನ ಎಲ್ಲವೂ ಸಿಕ್ಕುತ್ತದೆ. ಕುರುಡು ಅನುಕರಣೆಯಿಂದ ಏನನ್ನೂ ಸಾಧಿಸಲಾಗುವುದಿಲ್ಲ.

–ನೆಪೋಲಿಯನ್

★ ಕೆಲಸವನ್ನು ಅವಸರವಾಗಿ ಮಾಡಿ, ಊಟವನ್ನು ನಿಧಾನವಾಗಿ ಮಾಡಿ.

–ಕನ್‌ಫ್ಯೂಷಿಯಸ್

★ ಎರಡು ವಿಷಯಗಳು ನಾಚಿಕೆ ಪಡುವಂಥವು: ಮಾತನಾಡುವ ಸಮಯದಲ್ಲಿ ಮೌನವಾಗಿರುವುದು ಮತ್ತು ಮೌನವಾಗಿರಬೇಕಾದ ಸಮಯದಲ್ಲಿ ಮಾತನಾಡುವುದು.

–ಶೇಖ್‌ಸಾದಿ

★ ಶೀಲದಿಂದ ನಮ್ಮ ಚಾರಿತ್ರ್ಯ ನಿರ್ಮಾಣವಾಗುತ್ತದೆ. ಶೀಲ ನಮ್ಮ ಗತಿಯನ್ನು ದೃಢಗೊಳಿಸುತ್ತದೆ.

–ರವೀಂದ್ರನಾಥ ಠಾಕೂರ್

★ ಮನುಷ್ಯ ನಿರಾಸೆ, ನೋವುಗಳನ್ನು ತನ್ನ ಬದುಕಿನ ಒಂದು ಭಾಗ ಎಂದು ತಿಳಿದರೆ ಸಂತೋಷದಿಂದ ಇರಬಲ್ಲ.

–ಶಂ.ಬಾ.ಜೋಷಿ

★ ಹೆಚ್ಚು ಹೆಚ್ಚು ಓದಿದಂತೆ ಜ್ಞಾನ ಹೆಚ್ಚುತ್ತದೆ. ತಪಸ್ಸು ಹೆಚ್ಚು ಮಾಡಿದಂತೆ ನಾವು ಎಷ್ಟು ಅಲ್ಪಜ್ಞಾನಿಗಳು ಎಂಬುದು ತಿಳಿಯುತ್ತದೆ.

–ಡ್ರೈಡನ್

★ ನೀವು ಚಿಂತಿಸುವ ಒಳ್ಳೆಯ ಚಿಂತನೆಗಳು ನೀವು ನಿರೀಕ್ಷಿಸದೇ ಇರುವಷ್ಟು ಅದ್ಭುತ ಯಶಸ್ಸು ತಂದು ಕೊಡುತ್ತದೆ.

–ರೋಜರ್